<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ</u>

<u>ಸಿಸಿ ನಂ.***386/2019***</u>

ಚಾಸಾ-06 ಫ್ರಾಸಾ-03

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 24.01.2025

| | | |
|---|---|---|
| ಹೆಸರು | : | ಶೈಲಜಾ |
| ಗಂಡನ ಹೆಸರು | : | ಲಕ್ಷಣಸಿಂಗ |
| ವಯಸ್ಸು | : | 51 ವರ್ಷ |
| ಉದ್ಯೋಗ | : | ಶಿಕ್ಷಕಿ |
| ವಾಸಸ್ಥಳ | : | ಅಫಜಲಪೂರ |

-: <u>ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-</u>

ಚಾಸಾ-1 ರವರ ಪರಿಚಯ ಇರುತ್ತದೆ. ದಿಃ 05.10.2017 ರಂದು ಚಾಸಾ-1 ರವರ ಮನೆ ಕಳ್ಳತನವಾಗಿರುತ್ತದೆ. ನಾನು ನನ್ನ ಕರ್ತವ್ಯಕ್ಕೆ ಹೋಗಿರುತ್ತೇನೆ ಆದ್ದರಿಂದ ಮುಂದೆ ಏನು ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲಾ. ತದ ನಂತರ ಈ ಪ್ರಕರಣದ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲಾ.

**(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

<u>ಪಾಟೀ ಸವಾಲುಃ ಸ.ಸ.ಅ. ರವರಿಂದ</u>

ದಿಃ 03.10.2018 ರಂದು ರಾತ್ರಿ 11.00 ಗಂಟೆಗೆ ಚಾಸಾ-1 ರವರು ನಮ್ಮ ಮನೆ ಕಳ್ಳತನವಾಗಿದೆ ಎಂದು ನನಗೆ ತಿಳಿಸಿರುತ್ತಾರೆ ಎಂದರೆ ಸರಿ. ತದ ನಂತರ ನಾನು ಚಾಸಾ-1 ರವರ ಮನೆಗೆ ಹೋಗಿ ನೋಡಿದಾಗ ಮನೆಯ ಹಿಂದಿನ ಬಾಗಿಲು ತೆರೆದಿತ್ತು ಮತ್ತು ಮನೆಯಲ್ಲಿ ಇದ್ದ 2 ಗ್ರಾಂದ ಒಟ್ಟು 5 ಊಂಗರುಗಳು 5 ಗ್ರಾಂನ ಎರಡು ಲಾಕೇಟಗಳು ಒಟ್ಟು 25 ಗ್ರಾಂನ ಬಂಗಾರದ ಆಭರಣಗಳು ಕಳ್ಳತನವಾಗಿರುವುದನ್ನು ನಾನು ಮತ್ತು ನನ್ನ

ಗಂಡ ಹೋಗಿ ನೋಡಿರುತ್ತೇವೆ ಎಂದರೆ ಸರಿ. ನಾನು ಚಾಸಾ-1 ರವರ ಮನೆಗೆ ಹೋಗಿ ನೋಡಿದಾಗ ಅವರ ಮನೆಯ ಅಲಮಾರಿಯ ಬಾಗಿಲು ತೆರಿದಿದ್ದು, ಅದರಲ್ಲಿರುವ ಬಟ್ಟೆಗಳು ಚಲ್ಲಾ-ಪಿಲ್ಲಿಯಾಗಿ ಬಿದಿದ್ದವು ಎಂದರೆ ಸರಿ. ಸದರಿ ವಿಷಯವನ್ನು ದಿಃ 05.10.2018 ರಂದು ಪೋಲಿಸರ ಮುಂದೆ ನಾನು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

ದಿಃ 13.10.2018 ರಂದು ಚಾಸಾ-1 ರವರು ಮನೆಯಲ್ಲಿ ಇದ್ದ ಬೆಳ್ಳಿಯ ಸಾಮಾನುಗಳು ಮತ್ತು ರೂ.1,70,000/-ಗಳನ್ನು ಸಹ ಕಳ್ಳತನಾವಾಗಿರುತ್ತವೆ ಎಂದು ನನಗೆ ತಿಳಿಸಿರುತ್ತಾರೆ ಎಂದರೆ ಸರಿ. ದಿಃ 31.10.2018 ರಂದು ಚಾಸಾ-1 ರವರನ್ನು ಅಫಜಲಪೂರ ವೃತ್ತ ಪೋಲಿಸರು ಠಾಣೆಗೆ ಕರೆಯಿಸಿ ಕಳ್ಳತನ ಮಾಡಿದ ವ್ಯಕ್ತಿಯ ಹೆಸರು ಲಕ್ಷಣ ಸಲಗರ ಅಂತಾ ತಿಳಿಸಿರುತ್ತಾರೆ ಎಂದು ನನಗೆ ಹೇಳಿರುತ್ತಾರೆ ಎಂದರೆ ಸರಿ. ಚಾಸಾ-1 ರವರು ನನಗೆ ಕಳ್ಳತನವಾದ ಬಂಗಾರ, ಬೆಳ್ಳಿ ಮತ್ತು ರೂ.1,26,000/-ಗಳನ್ನು ಮರಳಿ ಕೊಟ್ಟಿದ್ದು, ಉಳಿದ ರೂ.44,000/-ಗಳನ್ನು ಆರೋಪಿಯು ಖರ್ಚು ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ ಎಂದರೆ ಸರಿ. ದಿಃ 31.10.2018 ರಂದು ಚಾಸಾ-1 ರವರು ದೊರೆತ 23 ಗ್ರಾಂ ಬಂಗಾರವನ್ನು ಪೋಲಿಸ ಠಾಣೆಯಲ್ಲಿ ಗುರುತಿಸಿ ಪಡೆದುಕೊಂಡಿರುವುದನ್ನು ನನಗೆ ಹೇಳಿರುತ್ತಾರೆ ಎಂದರೆ ಸರಿ.

ಪಾಟೀ ಸವಾಲುಃ ಆರೋಪಿ ಪರ ಶ್ರೀ **KGP** ವಕೀಲರಿಂದಃ-

ನನಗೆ ಘಟನಾ ಸ್ಥಳದ ಚೆಕ್ ಬಂದಿಯನ್ನು ಹೇಳಲು ಬರುವುದಿಲ್ಲಾ. ಸಾಕ್ಷಿಯು ನನಗೆ ಕಳ್ಳತನವಾದ ಬಗ್ಗೆ ಮಾತ್ರ ಗೊತ್ತಿರುತ್ತದೆ ಎಂದು ನುಡಿಯುತ್ತಾ. ಯಾರು ಕಳ್ಳತನ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲಾ ಎಂದು ನುಡಿಯುತ್ತಾರೆ. ಕಳ್ಳತನ ಮಾಡಿದ ವ್ಯಕ್ತಿಯ ಹೆಸರನ್ನು ನನಗೆ ಯಾರು ತಿಳಿಸಿಲ್ಲಾ ಎಂದರೆ ಸರಿ. ಸದರಿ ಘಟನೆಯ ಕುರಿತು ನನಗೆ ಯಾರು ವಿಚಾರಣೆ ಮಾಡಿಲ್ಲಾ ಮತ್ತು ನಾನು ಯಾರ ಮುಂದೆ ಹೇಳಿಕೆ ನೀಡಿಲ್ಲಾ ಎಂದರೆ ಸರಿ.

ಮರು ವಿಚಾರಣೆಃ - ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ